ಶೈಲಜಾ ವಿಜಯಕುಮಾರ್ ಎಂದೇ ಗುರುತಿಸಿಕೊಂಡಿರುವ ಶೈಲಜಾ ಎಸ್. ಅವರು ಕಥೆ, ಕವನ ಮತ್ತು ನಾಟಕಗಳನ್ನು ಬರೆಯುವ ಮೂಲಕ ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ಉನ್ನತ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾಗಿ ನಿವೃತ್ತಿ ಹೊಂದಿದ್ದು, ಬರವಣಿಗೆಯ ಕಾಯಕವನ್ನು ಮತ್ತೆ ಕೈಗೆತ್ತಿಕೊಂಡಿದ್ದಾರೆ. ಅವರ 'ಶೋಧನೆ' ಎಂಬ ಕಥಾ ಸಂಕಲನ, 'ನಿಮಗೊಂದು ಕನಸಿದೆಯೆ?' ನಾಟಕಗಳ ಸಂಕಲನ, 'ಒಡಲ ಕಡಲು' ಎಂಬ ಕವನ ಸಂಕಲನ ಪ್ರಕಟವಾಗಿದೆ. ಚಿತ್ರದುರ್ಗದಲ್ಲಿ ಹುಟ್ಟಿ, ಮೈಸೂರಿನಲ್ಲಿ ಶಿಕ್ಷಣ ಪಡೆದಿರುವ ಅವರು, ಪ್ರಸ್ತುತ ಬೆಂಗಳೂರು ನಿವಾಸಿ.

ಉಪ್ಪಿಟ್ ಕೊಡೋಕೆ. ನಾನೂ ಹೀಗೇ ಇರ್‍ತೀನಿ ಆಯ್ತಾ.... ನೀನ್ ಬೇಕಿದ್ರೆ ಆ ಜುಮುಕಿ, ಆ ಬಳೆ, ಕಾಂಚೀಪುರಂ ಸೀರೆ ಎಲ್ಲ ಸುತ್ಕೊಂಡ್ ಕೂತ್ಕೋ, ಆಯ್ತಾ' ಅಪ್ಪ ಮಗಳು ಇಬ್ಬರೂ ಜೋರಾಗಿ ನಗಲು ಪ್ರಾರಂಭಿಸಿದರು.

ಹೀಗೇ ನಾನು ಯಾವಾಗಲೂ ಒಂಟಿ. ಇವರಿಬ್ಬರದ್ದೇ ಒಂದು ಗುಂಪು. ರೋಜರ್ ಅಂತೇ ರೋಜರ್ ...ಬಿಳೀ ತೊಗಲಿನವನು. ಹೇಗೆ? ಅವನನ್ನು ನನ್ನ ಅಳಿಯನನ್ನಾಗಿ ಸ್ವೀಕರಿಸಬೇಕೋ ತಿಳಿಯದು. ಒಂದು ಕ್ಷಣ ಆ ಹುಡುಗನ ಮೇಲೆ ಕೋಪವೇ ಬಂದಿತ್ತು. ಆದರೂ ಸಂಭಾಳಿಸಿಕೊಂಡೆ. ನಾನು ಅವನನ್ನು ಅಳಿಯ ಎನ್ನದಿದ್ದರೇನು ಮಗಳಿಗೆ ಒಪ್ಪಿಗೆಯಾದ ಮೇಲೆ ಎಲ್ಲಾ ಮುಗಿದ ಹಾಗೇ. ಚರ್ಚೆಗೆ, ಮರುಪ್ರಶ್ನೆಗೆ ಅವಕಾಶವೇ ಇಲ್ಲ. ನಮ್ಮ ದೇಶದಲ್ಲಿ ಹುಡುಗಿಯನ್ನು ಬಿಟ್ಟು, ಮಿಕ್ಕೆಲ್ಲರೂ ಒಪ್ಪಬೇಕು. ಅಪ್ಪನ ಅಣ್ಣ ತಮ್ಮಂದಿರು, ಅಮ್ಮನ ಅಕ್ಕ ತಂಗಿಯರು.... ಅಪ್ಪನ ಕೊನೆಯ ತಮ್ಮ ನನ್ನ ಚಿಕ್ಕಪ್ಪ ನನ್ನನ್ನು ದೂರದೇಶಕ್ಕೆ ಕಳುಹಿಸಬಾರದು ತಮಗೆ ಸಂಬಂಧ ಒಪ್ಪಿಗೆ ಇಲ್ಲವೆಂದು ಮುನಿಸಿಕೊಂಡಿದ್ದರು. ಆಮೇಲೆ ಮನೆಯವರೆಲ್ಲ ಕಷ್ಟಪಟ್ಟು ಚಿಕ್ಕಪ್ಪನನ್ನು ಒಪ್ಪಿಸಿದ್ದರು. ಅದರೆ ಒಂದೇ ಒಂದು ಬಾರಿಯಾದರೂ, ನನ್ನನ್ನು ಕೇಳುವ ವ್ಯವಧಾನ ಯಾರಿಗೂ ಇರಲಿಲ್ಲ. ಒಳ್ಳೆ ಮನೆತನ, ಒಳ್ಳೆಯ ಜನ ಹುಡುಗ ಲಕ್ಷಣವಂತ, ಕೈತುಂಬಾ ಸಂಪಾದನೆ. ಇನ್ನೇನು ಬೇಕು ನಮ್ಮ ಸುಮಾಳಿಗೆ ಅಂತ ನನ್ನ ಪರವಾಗಿ ಅವರೇ ಮಾತನಾಡಿದ್ದುಂಟು. ಅದನ್ನೆಲ್ಲಾ ನೆನೆದರೆ ಇಲ್ಲಿ ನಮ್ಮ ಸಂಯುಕ್ತ ತನಗಿಷ್ಟ ಬಂದ ಹುಡುಗನನ್ನು ತಾನೇ ಆಯ್ಕೆ ಮಾಡುತ್ತಿರುವುದೇನೋ ಒಂದು ರೀತಿಯಲ್ಲಿ ಸರಿ ಎನಿಸುತ್ತದೆ. ಆದರೆ ನಮ್ಮ ಸಂಸ್ಕೃತಿ - ಹುಡುಗ ನಮ್ಮ ದೇಶದವನಲ್ಲವಲ್ಲ. ಆಗಲೇ ಹೇಳಿದೆನಲ್ಲ ಇಲ್ಲಿ ಎಲ್ಲ ಕ್ಯಾಶ್ಯುವಲ್. ಮದುವೇನೂ ಕ್ಯಾಶುವಲ್, ವಿಚ್ಛೇದನವೂ ಕ್ಯಾಶುವಲ್. 'Mummy, he has come.' ಸಂಯುಕ್ತಾಳ ಕೂಗು ನನ್ನನ್ನೆಚ್ಚರಿಸಿತು. ರೋಜರ್‌ನನ್ನು ಒಳಗೆ ಕರೆತಂದು ಸಂಯುಕ್ತಾ ನಮಗೆಲ್ಲ ಪರಿಚಯಿಸಿದಳು. ಅವನು ಕಷ್ಟಪಟ್ಟು ಎರಡೂ ಕೈಜೋಡಿಸಿ ಅಮೆರಿಕ್ಕನ್ನರ ಹಾಗೆ, 'ನ್ಯಾಮಸ್ತೆ' ಎಂದ. ನಾನು ಅಡುಗೆ ಮನೆ ಸೇರಿಕೊಂಡೆ. ಅಲ್ಲಿಂದಲೇ ಇಣುಕುತ್ತಾ ಅವರ ಮಾತುಗಳನ್ನು ಕೇಳಿಸಿಕೊಂಡೆ. ಅವನು ಮಾತುಮಾತಿಗೂ ನನ್ನ ಮಗಳನ್ನು ಸ್ಯಾಮ್ಮಿ, ಸ್ಯಾಮ್ಮಿ ಎಂದು ಕರೆಯುವಾಗ, ಅಯ್ಯೋ ನನ್ನ ಮಗಳನ್ನು ಕಳೆದುಕೊಂಡುಬಿಟ್ಟೆ ಎಂಬ ಭಾವ. ಅಯ್ಯೋ ನನ್ನ ಮಗಳು, ನಾನು ಹೆತ್ತು ಹೊತ್ತು ಸಾಕಿದ ಮಗಳು ಬಿಳಿಯರ ಪಾಲಿನವಳಾಗಿ ಬಿಡುತ್ತಾಳೆಂಬ ಭಾವ. ಅಳು ಉಮ್ಮಳಿಸಿಕೊಂಡು ಬರತೊಡಗಿತು. ಕಣ್ಣೀರನ್ನು ಒರೆಸಿಕೊಂಡು ಅವರಿಗೆ ಸಿಹಿ ತಿಂಡಿ ಹಾಗೂ ಇತರ ಸ್ನ್ಯಾಕ್ಸ್ ತಂದಿಟ್ಟೆ. ಅವರೆಲ್ಲಾ ಮಾತನಾಡುತ್ತಿದ್ದಾಗ ನನಗೆ ನನ್ನ ಮಗಳದ್ದೇ ಚಿಂತೆ. ಬುದ್ಧಿ ಬಂದಾಗಿನಿಂದ ಇವಳನ್ನು ಭಾರತಕ್ಕೆ ಕರೆದೊಯ್ಯದೆ ಎಲ್ಲೋ ತಪ್ಪು ಮಾಡಿಬಿಟ್ಟೆನೇನೋ. ಹೈಸ್ಕೂಲ್‌ಗೆ ಬಂದಾಗಿನಿಂದ ಇವಳು ವಿದ್ಯಾಭ್ಯಾಸದ ಹೊರೆ ಹೆಚ್ಚುತ್ತಾ ಹೋಯಿತು. ಒಂದಾದ ನಂತರ ಒಂದು ಪರೀಕ್ಷೆ. ಎಲ್ಲರನ್ನು ಮೀರಿಸಿ ಇಲ್ಲಿಯ ಯುನಿವರ್ಸಿಟಿಯಲ್ಲಿ ಒಳ್ಳೆಯ ಕೀರ್ತಿ ಗಳಿಸಿಕೊಂಡಳು. ಆದರೆ, ಅವಳಿಗೆ ನಮ್ಮ ನೆಲದ ಪರಿಚಯವೇ ಇಲ್ಲ. ಅವಳಿಗೇನೂ ಗೊಂದಲವಿಲ್ಲ. ಆದರೆ ಅವಳಿಗಿಂತ ಹೆಚ್ಚಾಗಿ ನನಗೇ ದುಃಖ.

ರೋಜರ್ ಬಂದು ಹೋದಮೇಲೆ ನಾನೊಬ್ಬಳೇ ನನ್ನ ಇಷ್ಟವಾದ ಜಾಗ, ತುಳಸಿ ಇರುವ ಪ್ಯಾಟಿಯೊದಲ್ಲಿ ಕುಳಿತ್ತಿದ್ದೆ. ಸಂಯುಕ್ತಾ ನನ್ನನ್ನು ಹುಡುಕುತ್ತಾ ಬಂದಳು. ರೋಜರ್ ಬಗ್ಗೆ ಹೇಗನ್ನಿಸ್ತು ನಿಂಗೇ. ಅವನು ತುಂಬಾ